ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 571

ಸದಸ್ಯರ ಹೆಸರು : ಡಾ|| ತೇಜಸ್ವಿನಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 17.12.2021

ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

ಪ್ರಶ್ನೆ	ಉತ್ತರ
(ಅ) ಇತ್ತೀಚೆಗೆ ರಾಜ್ಯದಲ್ಲಿ ಸುರಿದ ಭಾರಿ ಮಳೆಯಿಂದ ರೈತರಿಗಾದ ಬೆಳೆ ನಷ್ಟವೆಷ್ಟು; ಅತೀವೃಷ್ಟಿಯಿಂದ ಭಾದಿತರಾದ ರೈತರ ಸಂಖ್ಯೆ ಎಷ್ಟು; ಯಾವ ರೀತಿ ಪರಿಹಾರ ಯೋಜನೆ ಒದಗಿದಲಾಗಿದೆ; ಯಾವ ರೀತಿಯ ಬೆಳೆಗಳು ನಾಶವಾಗಿವೆ; ನಷ್ಟದ ಅಂದಾಜು ಮಾಡಲು ಯಾವ ವೈಜ್ಞಾನಿಕ ಕ್ರಮ ಅನುಸರಿಸಲಾಗಿದೆ;	ಅತಿವೃಷ್ಟಿಯಿಂದ ಬೆಳೆಹಾನಿಯಾದ ಪ್ರದೇಶಗಳಲ್ಲಿ, ಕೃಷಿ, ತೋಟಗಾರಿಕೆ ಹಾಗೂ ಕಂದಾಯ ಇಲಾಖೆಯಿಂದ ಜಂಟಿ ಸರ್ವೆ ನಡೆಸಿ ಬೆಳೆ ಹಾನಿಯ ಪ್ರಮಾಣ ಹಾಗೂ ವಿಸ್ತೀರ್ಣವನ್ನು ನಿರ್ಧರಿಸಲಾಗುತ್ತದೆ. ಸದರಿ ತಂಡದ ವರದಿಯನುಸಾರ ಜುಲೈ ರಿಂದ ನವೆಂಬರ್ ವರೆಗೆ, ಒಟ್ಟು 12.54 ಲಕ್ಷ ಹೆಕ್ಟೇರ್ ಬೆಳೆಹಾನಿಯಾಗಿದೆ. ಬೆಳೆ ಹಾನಿಯಾದ ಸಂತ್ರಸ್ಥರಿಗೆ ಕೇಂದ್ರ ಸರ್ಕಾರ SDRF/NDRF ಮಾರ್ಗಸೂಚಿಯನ್ವಯ ಇನ್‌ಪುಟ್ ಸಬ್ಸಿಡಿಯನ್ನು ಪಾವತಿಸಲಾಗುತ್ತದೆ.
(ಆ) ಕೇಂದ್ರದಿಂದ ಪ್ರವಾಹ ಪೀಡಿತ ಕೃಷಿ ವಲಯಕ್ಕೆ ಬಂದಿರುವ ಪರಿಹಾರವೆಷ್ಟು; ಎಷ್ಟು ನಿರೀಕ್ಷೆ ಇದೆ; ಯಾವಾಗ ಬರಲಿದೆ; ಎಷ್ಟು ಹಂತಗಳಲ್ಲಿ ಬರಲಿದೆ; ಅಗತ್ಯ ಮಾಹಿತಿ ಅಂಕಿ ಅಂಶ ನೀಡಲಾಗಿದೆಯೇ;	ಜುಲೈ ರಿಂದ ನವೆಂಬರ್ ವರೆಗೆ, ಒಟ್ಟು 12.54 ಲಕ್ಷ ಹೆಕ್ಟೇರ್ ಬೆಳೆಹಾನಿಯಾಗಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಇನ್‌ಪುಟ್ ಸಬ್ಸಿಡಿ ಪಾವತಿಗಾಗಿ ರೂ.1111.84 ಕೋಟಿ ಆರ್ಥಿಕ ನೆರವನ್ನು ಕೋರಿದ್ದು, ಕೇಂದ್ರದಿಂದ ಅನುದಾನ ನಿರೀಕ್ಷಿಸಲಾಗಿದೆ.
(ಇ) ರೈತರ ರಾಸುಗಳಿಗೆ ದನಕರು ಕುರಿ ಕೋಳಿ ಹೀಗೆ ಕೃಷಿಕರ ಭಾಗವಾಗಿರುವ ರೈತ ಅವಲಂಬಿತ ಪ್ರಾಣಿಗಳಿಗೆ ಅತಿವೃಷ್ಟಿ ಕಾಲದಲ್ಲಿ ಯಾವ ರೀತಿಯ ಆಹಾರ (ಮೇವು) ವಿತರಿಸಲಾಯಿತು;	ಅತಿವೃಷ್ಟಿ/ಪ್ರವಾಹ ಉಂಟಾಗಿರವ ಪ್ರದೇಶಗಳಲ್ಲಿ ಜಾನುವಾರು ಸಂರಕ್ಷಣೆಗಾಗಿ ಅಗತ್ಯಕತೆಯನುಸಾರ ಕಾಳಜಿ ಕೇಂದ್ರದ ಸಮೀಪದಲ್ಲಿ ಗೋಶಾಲೆ ತೆರೆಯಲು ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ. ಜುಲೈ ಮಾಹೆಯ ಪ್ರವಾಹ ಸಂದರ್ಭದಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ 40 ಗೋಶಾಲೆಗಳನ್ನು ತೆರೆದು 43,913 ಜಾನುವಾರುಗಳನ್ನು ಸಂರಕ್ಷಿಸಲಾಗಿತ್ತು.
(ಈ) ಬಹು ಬೆಳೆ ತೆಗೆಯುತ್ತಿದ್ದ ರೈತರಿಗೆ ಅತಿ ಮಳೆ / ಅಕಾಲಿಕ ಮಳೆಯಿಂದ ಯಾವ ರೀತಿ ತೊಂದರೆಯಾಗಿದೆ; ಯಾವ ರೀತಿಯ ಪರಿಹಾರ ನೀಡಲು ಇಲಾಖೆ ಯೋಜಿಸಿದೆ? (ವಿವರ ನೀಡುವುದು)	ಬಹು ಬೆಳೆ ತೆಗೆಯುತ್ತಿದ್ದ ರೈತರಿಗೆ ಅತಿ ಮಳೆ / ಅಕಾಲಿಕ ಮಳೆಯಿಂದಾಗಿ ಆರ್ಥಿಕವಾಗಿ ನಷ್ಟವಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಯನ್ವಯ ಪ್ರತಿ ಹೆಕ್ಟೇರ್‌ಗೆ ರೂ.18,000/- ಇನ್‌ಪುಟ್ ಸಬ್ಸಿಡಿಯನ್ನು ಗರಿಷ್ಟ 2 ಹೆಕ್ಟೇರ್‌ಗೆ ಸೀಮಿತಗೊಳಿಸಿ ಇನ್‌ಪುಟ್ ಸಬ್ಸಿಡಿಯನ್ನು ವಿತರಿಸಲಾಗುತ್ತದೆ ಹಾಗೂ ರೈತರು ತಾವು ಬೆಳೆದಿರುವ ಬೆಳೆಗಳಿಗೆ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ ನೋಂದಾಯಿಸಿದಲ್ಲಿ ಅಕಾಲಿಕ ಮಳೆಯಿಂದಾದ ಬೆಳೆ ನಷ್ಟಕ್ಕೆ ಮಧ್ಯಂತರ ಪರಿಹಾರವನ್ನು ಕೃಷಿ ಇಲಾಖೆಯಿಂದ ನೀಡಲಾಗುತ್ತದೆ.

ಕಂಇ 601 ಟಿಎನ್‌ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು